1	2	3	4
33.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	19	21
34.	ಭೂ ವಿಜ್ಞಾನ ಇಲಾಖೆ	10	11
35.	ಮಹಾನಗರ ಇಲಾಖೆ (ಬಿ ಸಿ ಸಿ)	19	20
36.	ಲೋಕಾಯುಕ್ತ	01	02
37.	ಬಿ.ಡಬ್ಲ್ಯು ಎಸ್ ಎಸ್ ಬಿ	04	04
38.	ವರ್ಕ್ಸ್ ಬೋರ್ಡ್	01	01
39.	ಕೆ ಜಿ ಇ ಡಿ	04	05
40.	ವಾಣಿಜ್ಯ ತೆರಿಗೆ	09	14
41	ಸರ್ವೆ ಮತ್ತು ಭೂ ದಾಖಲೆ	21	21
42.	ಇಂಧನ	01	01
43.	ಪ್ರಾಚ್ಯ ವಸ್ತು ಸಂಶೋಧನಾಲಯ	01	01
44.	ಹಣಕಾಸು	08	10
45.	ವಾರ್ತಾ ಮತ್ತು ಪ್ರಚಾರ	01	01
46.	ನ್ಯಾಯಾಲಯ ಇಲಾಖೆ	01	01
	ಒಟ್ಟು	**1086**	**1275**

ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಅಭಾವ

1852 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಕನಿಷ್ಠ ಕುಡಿಯುವ ನೀರಿನ ಸರಬರಾಜಿಗೂ ವಿದ್ಯುಚ್ಛಕ್ತಿ ನೀಡದಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಇ) *ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಅಭಾವ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಇ) *ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ. ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿಯ ಕೊರತೆಯಿದ್ದರೂ, ಕುಡಿಯುವ ನೀರಿನ ಸ್ಥಾವರಗಳಿಗೆ ಆದ್ಯತೆಯ ಮೇರೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ. ಮತ್ತು ಕುಡಿಯುವ ನೀರಿನ ಸರಬರಾಜಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಇ) ಮತ್ತು ಈ) ದೊಡ್ಡರಾಯ ಪೇಟೆಯಲ್ಲಿರುವ 66 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹಾಗೂ ಕಡಕೊಳ 220 ಕೆ.ವಿ. ಸ್ಟೇಷನ್‌ನಿಂದ ದೊಡ್ಡರಾಯಪೇಟೆಗೆ ಬರುವ 66 ಕೆ.ವಿ. ಪ್ರಸರಣಾ ಮಾರ್ಗ (ಸಿಂಗಲ್ ಸರ್ಕ್ಯೂಟ್ ಲೈನ್) ದಲ್ಲಿರುವ ಅಧಿಕ ಒತ್ತಡವು ಚಾಮರಾಜನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗೆ ಕಾರಣವಾಗಿದೆ. ಈ ಸಮಸ್ಯೆಯನ್ನು ನಿವಾರಿಸಲು ಮಂಡಳಿಯು ಚಾಮರಾಜನಗರದಲ್ಲಿ ಒಂದು 220 ಕೆ.ವಿ ಸ್ಟೇಷನ್‌ನನ್ನು ನಿರ್ಮಿಸಲು ಉದ್ದೇಶಿಸಿದೆ. ಸಧ್ಯಕ್ಕೆ ಕಡಕೊಳದಿಂದ ಚಾಮರಾಜನಗರಕ್ಕೆ 220 ಕೆ.ವಿ ವಿದ್ಯುತ್ ಮಾರ್ಗವನ್ನು ನಿರ್ಮಿಸಿ ಅದರ ಮೂಲಕ 66ಕೆ.ಮಿ ಸರಬರಾಜನ್ನು ಪಡೆಯಲು ಉದ್ದೇಶಿಸಲಾಗಿದೆ. ಚಾಮರಾಜನಗರದಲ್ಲಿ 220 ಕೆ.ವಿ ವಿದ್ಯುತ್ ಕೇಂದ್ರ ಸ್ಥಾಪನೆ ಹಾಗೂ ಕಡಕೊಳದಿಂದ ಚಾಮರಾಜನಗರಕ್ಕೆ 220 ಕೆ.ವಿ ಮಾರ್ಗ ನಿರ್ಮಾಣಕ್ಕೆ ಅಗತ್ಯವಿರುವ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಚಾಮರಾಜನಗರ ಹೊರವಲಯದ ಗಾಳಿಪುರದಲ್ಲಿರುವ ಸರ್ಕಾರಿ ಭೂಮಿಯಲಿ ಕನಿಷ್ಠ 70 ಎಕರೆ ಭೂಮಿಯನ್ನು ಆದಷ್ಟು ಜಾಗ್ರತೆ ಮಂಡಳಿಯ ವಶಕ್ಕೆ ಕೊಡಬೇಕೆಂದು ಚಾಮರಾಜನಗರ ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆಯಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಕುರಿತು

1853 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಚಿವರು. ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತಗಿಸುವರೇ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?*

ಆ) *ನಿವೇಶನಕ್ಕಾಗಿ ಕಟ್ಟಿರುವ ಠೇವಣಿಯ ಮೊಬಲಗು ಎಷ್ಟು?*

ಇ) *ಇವರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ತೀರ್ಮಾನಿಸಲಾಗಿದೆಯೇ?*

ಈ) *ಈಗ ಹಂಚಿಕೆ ಮಾಡುವುದಕ್ಕೆ ಸಿದ್ಧವಿರುವ ನಿವೇಶನಗಳ ಸಂಖ್ಯೆ ಎಷ್ಟು?*

ಉ) *ಹೊಸದಾಗಿ ಬಡಾವಣೆಗಳನ್ನು ಹಂಚಿಕೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?*